ಹೊತ್ತು ಕಣ್ಮುಚ್ಚಿದ. ಅಲ್ಲಿ ನೆರೆದ ಹತ್ತಾರು ಮಂದಿ ಸೇರಿದಂತೆ ಎಲ್ಲರೂ ಒಂದು ಗಳಿಗೆ ಸ್ತಬ್ಧರಾದರು.

'ಮೈಸೂರು ದೇಶದ ದಿಕ್ಕಿನಲ್ಲಿದ್ದಾಳೆ'

'ಊ. .ಊಂ...' ಎಂದು ಮುಲುಗುತ್ತಾ

'ಸುಖದಲ್ಲಿದ್ದಾಳೆ'...'ಆದರೂ ಸ್ವಲ್ಪ ತಕರಾರಿದೆ'

...'ಕಾನೂನು ಹೇಳ್ತಾಳೆ, ಕಾಕಿ, ಕರಿಕೋಟು ಅಂತ ಸುತ್ತಿಸ್ತಾಳೆ' 'ಕರು ಹತ್ರ ಹಸು ಬಂದೇ ಬತ್ತದೆ'

'ಹೋಗಿ ಹುಡುಕಿ ಎಳ್ಕೊಂಡು ಬನ್ರಿ' 'ಒಳ್ಳೇದಾಗುತ್ತೆ... ಇನ್ನು ಹೋಗು'

ಎಂದು ಪರಮೇಶ್ವರಪ್ಪ ಒಂದೊಂದೇ ಪದಗಳನ್ನು ಬಿಡಿಸಿ ಬಿಡಿಸಿ ಹೇಳುತ್ತಿದ್ದ. ಕ್ಷಣವೊತ್ತು ನಿಲ್ಲಿಸಿ ಒಂದೇ ಉಸುರಿನಲ್ಲೇ ಹೇಳುತ್ತಿದ್ದ. ಹೀಗೆ ಹೇಳುತ್ತಾ ಒಮ್ಮೆಲೆ ಕಣ್ಣುಬಿಟ್ಟು ಅಲ್ಲಿದ್ದ ಕುಂಕುಮ ಹಚ್ಚಿದ ನಿಂಬೆಹಣ್ಣನ್ನು ತೆಗೆದುಕೊಂಡು ಅದೇ ಮಂತ್ರಗಳನ್ನು ಪಠಿಸುತ್ತಾ ಹನುಮಕ್ಕಳ ಸೆರಗಿಗೆ ನಿಂಬೆಹಣ್ಣನ್ನು ಬಿಸಾಕಿ ಮತ್ತೆ ಕಣ್ಮುಚ್ಚಿ 'ಇದನ್ನ ಜೋಪಾನವಾಗಿ ಇಟ್ಕೊಂಡು ಹೋಗು, ಎಲ್ಲಾ ಸರಿ ಮಾಡ್ತಾಳೆ ದೇವಿ' ಎಂದು ಜೋರು ದನಿಯಲ್ಲಿ ಹೇಳಿದ. ಹನುಮಕ್ಕ ಮತ್ತು ಆಕೆಯ ತಂಗಿ ಸುಭದ್ರಮ್ಮ ಇಬ್ಬರೂ ಮೇಲೆದ್ದು ದೇವಿಗೆ ಕೈಮುಗಿದು ನಿಂತು ದೇವಿಗೆ ಬೆನ್ನು ತೋರಿಸದೇ ಹಾಗೇಯೇ ಹಿಂದಕ್ಕೆ ನಡೆದರು.

ವಾರದ ಹಿಂದೆ ತಂಗಿ ಸುಭದ್ರಮ್ಮನ ಮಗಳು ಅನ್ನಪೂರ್ಣಳು, ತನ್ನ ಇಬ್ಬರು ಮಕ್ಕಳಾದ ಹನ್ನೆರಡು ವಯಸ್ಸಿನ ತಿಮ್ಮೇಶ, ಒಂಬತ್ತು ವರ್ಷದ ಸೌಭಾಗ್ಯಳನ್ನು ಮತ್ತು ತನ್ನ ಗಂಡ ಕರಿವೀರಪ್ಪನನ್ನು ಬಿಟ್ಟು ಅದೇ ಊರಿನ ಇನ್ನೂ ಮದುವೆಯಾಗಿರದ ಶ್ರೀಕಂಠನ ಜೊತೆ ಮನೆ ಬಿಟ್ಟು ಹೋಗಿದ್ದಳು. ಕರಿವೀರನ ಕುಟುಂಬದವರು ಮನೆತನದ ಮರ್ಯಾದೆಗೆ ಅಂಜಿ ಈ ವಿಷಯವನ್ನು ಪೊಲೀಸ್ ಸ್ಟೇಷನ್‌ವರೆಗೆ ತೆಗೆದುಕೊಂಡು ಹೋಗಿರಲಿಲ್ಲ. ಈ ಕಾರಣದಿಂದ, ಆಕೆಯ ಸುಳಿವಿಗಾಗಿ ಅರವತ್ತು ಕಿಲೋಮೀಟರ್ ದೂರದಲ್ಲಿದ್ದ ಕಲ್ಲುಗುಡ್ಡೆ ಸೀಮೆಯ ಭೈರದೇವರಗುಡ್ಡದಲ್ಲಿದ್ದ ಮಾಟ-ಮಂತ್ರ ಮಾಡುವಲ್ಲಿ ಪ್ರಖ್ಯಾತನಾಗಿದ್ದ ಪರಮೇಶ್ವರಪ್ಪನ ಬಳಿಗೆ ಅನ್ನಪೂರ್ಣಳನ್ನು ಮರಳಿ ಮನೆಗೆ ಬರುವಂತೆ ಮಾಡಲು, ಹನುಮಕ್ಕ ತನ್ನ ತಂಗಿ ಸುಭದ್ರಮ್ಮಳೊಂದಿಗೆ ಬಂದಿದ್ದಳು.

ದಾರಿಯಲ್ಲಿ ಬರುತ್ತಾ ಅನ್ನಪೂರ್ಣಳನ್ನು ಪ್ರೀತಿಯಿಂದ ಸಾಕಿದ ಬಗ್ಗೆ, ತನ್ನ ತಮ್ಮ ಕರಿವೀರನಿಗೆ ತನ್ನ ಮಗಳನ್ನೇ ಕೊಟ್ಟು ಮದುವೆ ಮಾಡಿ ತವರಿನ ಸಂಬಂಧವನ್ನು ಉಳಿಸಿಕೊಳ್ಳಬೇಕೆಂಬ ಆಸೆಯಿಂದ ಒಡಹುಟ್ಟಿದ ತಮ್ಮನಿಗೆ ಕೊಟ್ಟು ಮದುವೆ ಮಾಡಿದ್ದಳು. ಸುಭದ್ರಮ್ಮ ಅದನ್ನೇ ನೆನಪಿಸಿಕೊಂಡು ಊರಿನಲ್ಲಿ ಸಂಬಂಧಿಕರ ನಡುವೆ ಮಗಳು ನಮ್ಮ ಮನೆತನದ ಮರ್ಯಾದೆ ಮೂರುಕಾಸಿಗೆ ಹರಾಜು ಹಾಕಿದಳೆಂದು ಗೋಳಾಡಿಕೊಂಡು, ಸೆರಗಿನಲ್ಲಿ ಕಣ್ಣೀರು ಒರೆಸಿಕೊಳ್ಳುತ್ತಾ ಇಬ್ಬರೂ ಬಸ್ಸು ಹಿಡಿದು ಊರಿಗೆ ಮರಳಿದರು.

ಊರಿನಲ್ಲಿ ನಡೆಯುವ ಜಾತ್ರೆ, ಹಬ್ಬಗಳಂದು ದೇವರು ಸಾಗಿಬರುವ ದಾರಿಯಲ್ಲಿ ನಡೆಮುಡಿ ಹಾಸುವ ಮತ್ತು ಪಂಜು ಹೊರುವ ಕಾಯಕವು ಕರಿವೀರನ ಕುಟುಂಬಕ್ಕೆ ಸೇರಿದ್ದು. ಕರಿವೀರನ ತಂದೆ-ತಾಯಿ ಜೀವಿಸಿದ್ದವರೆಗೂ ಅವರೇ ದೇವರ ಮುಂದೆ ಈ ಕಾರ್ಯಗಳನ್ನು ವಂಶಪಾರಂಪರಿಕವಾಗಿ ಮಾಡುತ್ತಿದ್ದರು. ಅದಕ್ಕೆ ಪ್ರತಿಯಾಗಿ ಊರಿನ ಗುಡಿಕಟ್ಟಿನವರು ದವಸ- ಧಾನ್ಯಗಳನ್ನು ಅವರಿಗೆ ನೀಡುತ್ತಿದ್ದರು. ಅವರ ನಂತರದ ದಿನಗಳಲ್ಲಿ ಕರಿವೀರ, ಆತನ ಹೆಂಡತಿ ಅನ್ನಪೂರ್ಣಳು ಜೊತೆಯಾಗಿ ಈ ದೇವರ ಸೇವೆಯನ್ನು ತಪ್ಪದೇ ಮಾಡಿಕೊಂಡು ಬರುತ್ತಿದ್ದರು. ಅಲ್ಲದೇ ಇಂತಹ ಹಬ್ಬ, ಜಾತ್ರೆಗಳ ದಿನಗಳಂದು ಮಾತ್ರ ಕರಿವೀರ ಊರಲ್ಲಿ ಪಂಜು ಹೊರುವ ಕಾಯಕ ಮಾಡುತ್ತಿದ್ದ. ಅದನ್ನು ಬಿಟ್ಟರೆ ಉಳಿದ ದಿನಗಳಲ್ಲಿ ತನಗಿದ್ದ ಸಣ್ಣ ಜಮೀನಿನಲ್ಲಿ ನೀರಿನ ಅನುಕೂಲ ಇದ್ದುದರಿಂದ ಯಾವುದಾದರೂ ಬೆಳೆ ಬೆಳೆಯುವುದು, ದನಕರ ಎಮ್ಮೆಗಳನ್ನು ನೋಡಿಕೊಂಡು ಇರುವುದು ಅವನ ನಿತ್ಯ ಕಾರ್ಯವಾಗಿತ್ತು. ಎಂದೂ ಸಹ ಊರಲ್ಲಿ ಯಾರ ಸಂಗತಿಗೂ ವಿನಾಕಾರಣ ಹಾಯ್ದವನಲ್ಲ. ಮನೆಯಲ್ಲಿ ಹೆಂಡತಿ ಅನ್ನಪೂರ್ಣಳೇ ಎಲ್ಲಾ ವ್ಯವಹಾರವನ್ನೂ ನೋಡಿಕೊಳ್ಳುತ್ತಿದ್ದಳು. ಅನ್ನಪೂರ್ಣ ವಯಸ್ಸಿನಲ್ಲಿ ಕರಿವೀರನಗಿಂತ ಹನ್ನೊಂದು ವರ್ಷ ಸಣ್ಣವಳಿದ್ದು ಹೈಸ್ಕೂಲಿನವರೆಗೂ ಓದಿದವಳಾಗಿದ್ದಳು. ಮಕ್ಕಳನ್ನು ಚೆನ್ನಾಗಿ ನೋಡಿಕೊಂಡು ಶಾಲೆಗೆ ಕಳುಹಿಸುತ್ತಿದ್ದಳು. ಎರಡು ಮೂರು ದಿನಕ್ಕೊಮ್ಮೆ ಗಂಡನ ಜೊತೆಯಲ್ಲಿ ಜಮೀನಿನ ಕೆಲಸದಲ್ಲಿ ನೆರವಾಗುತ್ತಿದ್ದಳು.